ಆದರೆ ಅಂಟುಗಿಂಟು ಇಲ್ಲದೆ ಅವು ಹೇಗೆ ಸಜ್ಜಾಕ್ಕೆ ಗಪ್ಪೆಂದು ಅಂಟಿ ಕೂರಲು ಸಜ್ಜಾದವೊ ಗೊತ್ತಿಲ್ಲ. ಮೊದಲ ಹಾಸಿನಲ್ಲಿ ಕೂತ ನೊಣಗಳ ಕಾಲು ಅಂಗದನ ಕಾಲುಗಳೇ ಇರಬೇಕು. ಒಂದೊಂದು ನೊಣಕ್ಕೆ ನೂರೈವತ್ತು ನೊಣಗಳು ಜೋತುಬಿದ್ದರೂ ಇಡೀ ಹುಟ್ಟು ಕಳಚಿ ಬೀಳುವುದಿಲ್ಲ.

ಮಾರನೇ ದಿನ ಶಿಸ್ತಾಗಿ, ಅಲ್ಲಲ್ಲೇ ಅವು ಮೆಲ್ಲಗೆ ಸರಿಯುತ್ತ ಗೋಲಾಕಾರ ಕೂತವು. ಕವುಚಿಟ್ಟ ಕರೀ ಬುಟ್ಟಿಯ ಹಾಗೆ. ಒಂದೆರಡು ಕ್ಲೋಸಪ್ ಶಾಟ್ ತೆಗೆದೆ. ಬೆನ್ನಮೇಲೆ ಚಿನ್ನದ ಬಣ್ಣದ ರೇಕುಗಳಿರುವ 15-20 ಮಿ.ಮೀ ಉದ್ದದ ದಷ್ಟಪುಷ್ಟ ನೊಣಗಳು. Apis dorsata. ಯಾಣದ ಬಂಡೆಗಳ ಮೇಲೆ, ಎತ್ತರದ ಮರಗಳ ಮೇಲೆ, ವಿಧಾನಸೌಧದ ನೆತ್ತಿಯ ಮೇಲೆ ಇರಬೇಕಾದವು. ನಮ್ಮಿಬ್ಬರಿಗೂ ಈಗ ಎಕ್ಸ್‌ಟ್ರಾ ಕೆಲಸ.

ಈ ಘನಘೋರ ಬಿಸಿಲಿನಲ್ಲಿ ಪಾಪ, ಅವಕ್ಕೆ ನೀರಡಿಕೆ ಆದೀತಲ್ಲ? ಒಂದು ಕಪ್‌ನಲ್ಲಿ ನೀರು ತುಂಬಿ ಹುಟ್ಟಿನ ಬಳಿ ಇಡುವಂತೆ ಇವಳಿಂದ ಆದೇಶ ಬಂತು.

'ಬರೀ ನೀರು ಯಾಕೆ, ಸಕ್ಕರೆ ನೀರು ಇಟ್ಟರೆ ಒಳಿತಲ್ಲವೆ?'

'ಸಕ್ಕರೆ ನೀರು ಯಾಕೆ, ಹೇಗಿದ್ದರೂ ಜೋನಿ ಬೆಲ್ಲ ಇದೆ -ಅದನ್ನೇ ಸೇರಿಸೋಣ'.

'ಜೋನಿ ಬೆಲ್ಲ ಏಕೆ, ಜೇನುತುಪ್ಪವೇ ಇದೆ. ಅದನ್ನೇ ನೀರಿಗೆ ಬೆರೆಸಿ ಇಡೋಣ'.

'ಓಕೆ. ಆದರೆ ಛೆ, ಛೆ, ಅದು ತೋಟದಿಂದ ತಂದ ತುಡುವಿ ಜೇನು. ಅದರಲ್ಲಿ ವೈರಸ್ ಗೀರಸ್ ಇದ್ದರೆ ಈ ಇಡೀ ಹೆಜ್ಜೇನು ಹುಟ್ಟೇ ಪಡ್ಚ ಆದೀತು... ಆರ್ಡಿನರಿ ಬೆಲ್ಲದ ನೀರೇ ಸಾಕು'.

'ಬುದ್ದೂ! ಕಪ್‌ನಲ್ಲಿ ಸಿಹಿನೀರನ್ನು ಕುಡಿಯಲೆಂದು ಬಂದರೆ ಅದರಲ್ಲೇ ಅವು ಮುಳುಗಿ ಹೋದಾವು. ಕಪ್ ಮಧ್ಯೆ ಒಂದೆರಡು ಬೆಣಚುಕಲ್ಲನ್ನು ಅರೆಬರೆ ಮುಳುಗಿದಂತೆ ಇಡಬೇಕು. ದ್ವೀಪದ ಮೇಲೆ ಕೂತಂತೆ ಅವು ಆರಾಮಾಗಿ ಬಂಡೆಯ ಮೇಲೆ ಕೂತು ಬಾಯಾರಿಕೆ ತಣಿಸಿಕೊಳ್ಳಬಹುದು'.

ಸರಿ, ಅಘನಾಶಿನಿ ನದಿದಂಡೆಯಿಂದ ತಂದ ನುಣುಪುಗಲ್ಲನ್ನು ಸೇರಿಸಿ, ಕಪ್‌ನಲ್ಲಿ ಮುಳುಗಿಸಿ, ಬಾಥ್‌ರೂಮ್ ಕಿಟಕಿಯ ಪರದೆಯನ್ನು ಇಷ್ಟೇ ಇಷ್ಟು ತೆರೆದು ಗೂಡಿನ ಬಳಿ ಅರವಟ್ಟಿಗೆ ಇಟ್ಟಿದ್ದಾಯಿತು. ರಾತ್ರಿ ಮತ್ತೊಂದು ಸಮಸ್ಯೆ ಎದುರಾಯಿತು. ಹೇಗೋ ಮೂರು ನಾಲ್ಕು ಜೇನ್ನೊಣಗಳು ಪಕ್ಕದ ಬಾಲ್ಕನಿಯ ಮೂಲಕ ಒಳಕ್ಕೆ ಅಡುಗೆ ಮನೆಗೆ ಬಂದು ಶತಪಥ ಹಾಕತೊಡಗಿದವು. 'ಒಗ್ಗರಣೆಗೆ ಇಂಗು ಹಾಕಬಾರದಿತ್ತು; ಅವಕ್ಕೂ ಬಾಯಲ್ಲಿ ನೀರು ಬಂದಿರಬೇಕು' ಎಂದೆ.

'ಮೊದಲು ಹೋಗಿ ಬಾಲ್ಕನಿಯ ಲೈಟ್ ಆರಿಸಿ ಬನ್ನಿ. ಇನ್ನುಮೇಲೆ ಬಾಲ್ಕನಿ ವಿಸಿಟ್ ಬಂದ್! ಇಲ್ಲಾಂದರೆ ಒಗ್ಗರಣೆಯಲ್ಲಿ ಒಣಮೆಣಸಿನ ತುಂಡುಗಳ ಬದಲು ಹನಿಬೀಗಳೇ ಬಿದ್ದಾವು'.

'ಸರಿ, ಆದರೆ ಈಗ ದಿಕ್ಕೆಟ್ಟು ಸುತ್ತುತ್ತಿರುವ ಈ ನಿಶಾಚರಿ ಬೀಗಳನ್ನೇನು ಮಾಡುವುದು?' ಬೀಬಿಯನ್ನೇ ಕೇಳಿದೆ. 'ಸೊಳ್ಳೆಬ್ಯಾಟ್ ತಂದು ಛಕ್ಕೆಂದು ಯಮಲೋಕಕ್ಕೆ ಅಟ್ಟಿಬಿಡಲೆ?' (ಯಮಲೋಕದಲ್ಲಿ ಜೇನು ಇದ್ದ ದಾಖಲೆ ಇದುವರೆಗೆ ಇಲ್ಲ. ಅವರಿಗೂ ಗೊತ್ತಾಗಲಿ ತುಸು ರುಚಿ)...

'ನೋ...!!!' ತನಗೇ ಶಾಕ್ ಹೊಡೆದಂತೆ ಪತ್ನೀಮಣಿ ನೋ... ವಿನ ದೃಷ್ಟಿ ಬೀರಿದಳು. ಹೇಗಾದರೂ ಅಹಿಂಸಾತ್ಮಕ ವಿಧಾನದಿಂದ ಅವುಗಳನ್ನು ಘರ್ ವಾಪಸಿ ಮಾಡಲು ನಿರ್ಧರಿಸಲಾಯಿತು. ಅಂತೂ ಇಂತು ಅವು ಸುಸ್ತಾಗಿ ಕೂತಿದ್ದ ಕ್ಷಣವನ್ನೇ ನೋಡಿ ಸೋಸುಸೌಟನ್ನು ನೊಣದ ಮೇಲೆ ಮೆಲ್ಲಗೆ ಬೋರಲು ಹಾಕಿದೆ. ತಳದಲ್ಲೊಂದು (ಯಾರದೋ) ಮದುವೆ ಆಮಂತ್ರಣದ ಕಾರ್ಡನ್ನು ಕತ್ತರಿಸಿ ಮೆಲ್ಲಗೆ ತೂರಿಸಿದ್ದಾಯಿತು (ಅವರ ವೈವಾಹಿಕ ಜೀವನ ಜೇನಿನಂತಿರಲಿ). ಈಗ ಈ ಜೇನ್ನೊಣಕ್ಕೆ ಗಾಸಿಯಾಗದಂತೆ, ಅದೂ ನಮ್ಮನ್ನು ಗಾಸಿಗೊಳಿಸದಂತೆ ಹುಷಾರಾಗಿ ಗೂಡಿನ ಬಳಿ ಬಿಟ್ಟಿದ್ದಾಯಿತು. ಇದೇ ದೃಶ್ಯ ಇನ್ನೂ ಮೂರು ಬಾರಿ ರೀಟೇಕ್ ಆಯಿತು. ಇನ್ನುಮೇಲೆ ಎಂಥ ಸೆಕೆಯಿದ್ದರೂ ಬಾಲ್ಕನಿಯ ಬದಲು ರೀಡಿಂಗ್ ರೂಮಿನಲ್ಲೇ ಕೂತು ಓದಬೇಕಾದ ಪ್ರಾರಬ್ಧ ನನಗೆ. ಅತ್ತ ಬಾಲ್ಕನಿಯ ಸೊಳ್ಳೆಗಳಿಗೆ ಉಪವಾಸ. ಕಚ್ಚಲೇಬೇಕೆಂದಿದ್ದರೆ ಅವು ಜೇನ್ನೊಣಗಳನ್ನೇ ಕಚ್ಚಲಿ.

ಮೂರನೇ ದಿನ ಇಡೀ ಗೂಡು ಮಗುಚಿಟ್ಟ ದೋಣಿಯಾಕಾರ ತಳೆಯಿತು. ಅಂದರೆ ರಟ್ಟು ಮಾಡಲು ಸಜ್ಜಾಗಿರಬೇಕು. ಡೈನಿಂಗ್ ಟೇಬಲ್ ಮೇಲೆ ಇವಳು ಮಂಕ್ರಿಗಟ್ಟಲೆ ಬೀಜದ ಪ್ಯಾಕೆಟ್‌ಗಳನ್ನು ಹರಡಿಕೊಂಡು ಕೂತಿದ್ದಳು. ಬೇಸಿಗೆ ಬಂತು, ಈಗೆಂತ ತರಕಾರಿ ಬೀಜಗಳನ್ನು ಮೊಳಕೆ ಬರಿಸುತ್ತಾಳೊ?